ಗಾಢವಾದ ಆಧ್ಯಾತ್ಮಿಕ ಅನುಭವದೊಳಗೆ ಇಳಿಯುತ್ತಾ ಹೋದಂತೆ ಸೋಫಿ ರೂಪಾಂತರವಾಗುತ್ತಾ ಹೋದ. ದೇವರು ಕೊಟ್ಟ ಜನ್ಮವನ್ನು ತಾನು ಹೇಗೆ ವ್ಯರ್ಥಮಾಡಿಕೊಳ್ಳುತ್ತಿದ್ದೇನೆಂದು ನೆನೆದು ಅವನಿಗೆ ನಾಚಿಕೆಯಾಯಿತು. ಎಂಥ ಕೊಳಚೆ ಗುಂಡಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆಂದು ಅವನಿಗೆ ಅರಿವಾಗತೊಡಗಿತು.

ಆದರೂ ಅವನ ಆತ್ಮ ಅಷ್ಟು ಬೇಗ ಧೃತಿಗೆಡಲಿಲ್ಲ. ಜಗತ್ತು ಎಷ್ಟು ಸುಂದರವಾಗಿದೆ. ತಾನು ಕಣ್ಣಿದ್ದೂ ಕುರುಡನಾಗಿದ್ದೇನೆ. ಮನಸ್ಸು ಮಾಡಿದರೆ ದಾರಿಯೊಂದು ತಾನೇ ತಾನಾಗಿ ತೆರೆದುಕೊಳ್ಳುತ್ತದೆ ಎಂದು ಅವನಿಗೆ ಭಾಸವಾಗತೊಡಗಿತು. ತನ್ನನ್ನು ಕಟ್ಟಿಹಾಕಿದ್ದ ಹತಾಶೆಯ ಸಂಕೋಲೆಗಳಿಂದ ಬಿಡಿಸಿಕೊಂಡು ಹೊಸ ಬಾಳಿನ ಕಡೆಗೆ ಹೆಜ್ಜೆಹಾಕಲು ಅವನು ನಿರ್ಧರಿಸಿದ. ಅವನಿಗಿನ್ನೂ ವಯಸ್ಸಿತ್ತು. ಕಾಲವೂ ಇತ್ತು. ನಾಳೆಯೇ ಒಂದು ಕೆಲಸವನ್ನು ಹುಡುಕಿ ಬೇರೆಯವರ ಹಂಗಿನಲ್ಲಿ ಜೀವಿಸುವುದನ್ನು ತೊರೆಯುತ್ತೇನೆಂದು ಸೋಫಿ ಚರ್ಚಿನ ಎದುರಿಗೆ ನಿಂತು ವಾಗ್ದಾನ ಮಾಡಿದ.

ಯಾರೋ ಅವನಿಗೆ ಡ್ರೈವರ್ ಕೆಲಸವನ್ನು ಕೊಡಿಸುತ್ತೇನೆಂದು ಹೇಳಿದ್ದರು. ಅವನು ಕಿವಿಗೆ ಹಾಕಿಕೊಂಡಿರಲಿಲ್ಲ. ನಾಳೆಯೇ ಅವರನ್ನು ಭೇಟಿಮಾಡಲು ಅವನು ತೀರ್ಮಾನಿಸಿದ. ಅವನ ಮನಸ್ಸಿನಲ್ಲಿ ಮತ್ತಷ್ಟು ಹೊಸ ಹೊಸ ವಿಚಾರಗಳು ಒಂದರ ಹಿಂದೆ ಹೊರಬರಲಾರಂಭಿಸಿದವು... ಅಷ್ಟರಲ್ಲಿ ಯಾರೋ ಅವನ ಭುಜವನ್ನು ಗಟ್ಟಿಯಾಗಿ ಹಿಡಿದುಕೊಂಡಂತೆ ಭಾಸವಾಗಿ ಸೋಫಿ ವಾಸ್ತವ ಜಗತ್ತಿಗೆ ಹಿಂದಿರುಗಿದ. ಅವನು ಹಿಂದಿರುಗಿ ನೋಡಿದ. ನೀಲಿ ಸಮವಸ್ತ್ರ ಧರಿಸಿದ್ದ ಪೊಲೀಸ್ ಆಫೀಸರ್ ಅವನ ಮುಂದೆ ನಿಂತಿದ್ದ!

"ಈ ಹೊತ್ತಿನಲ್ಲಿ ಇಲ್ಲೇನು ಮಾಡುತ್ತಿದ್ದೀಯಾ?" ಅವನು ಅಧಿಕಾರದ ದನಿಯಲ್ಲಿ ಕೇಳಿದ.

"ಏನಿಲ್ಲ. ಚರ್ಚ್ ಕಂಡಿತು. ಸ್ವಲ್ಪ ಹೊತ್ತು ಹಾಗೇ ನಿಲ್ಲೋಣ ಅಂತ ಅನಿಸಿತು." ಎಂದ ಸೋಫಿ.

"ಹಾಗೋ? ನನ್ನ ಹಿಂದೆ ಬಾ." ಪೊಲೀಸ್ ಹೇಳಿದ.

ಸೋಫಿ ಅವನ ಹಿಂದೆ ಹೊರಟ.

ಸೋಫಿ ಆ ರಾತ್ರಿಯನ್ನು ಪೊಲೀಸ್ ಸ್ಟೇಶನಿನಲ್ಲಿ ಕಳೆದ. ಮಾರನೆಯ ದಿನ ಅವನನ್ನು ಬ್ಲ್ಯಾಕ್‌ವೆಲ್ ದ್ವೀಪದ ಕೋರ್ಟಿಗೆ ಹಾಜರುಪಡಿಸಲಾಯಿತು.

ನ್ಯಾಯಾಧೀಶರು ಅವನಿಗೆ ಮೂರು ತಿಂಗಳ ಸಜೆ ವಿಧಿಸಿ ಜೈಲಿಗೆ ಕಳುಹಿಸಿದರು!

## ಒ'ಹೆನ್ರಿ (1862–1910)

ಒ' ಹೆನ್ರಿ ಹೆಸರಿನಿಂದ ಚಿರಪರಿಚಿತನಾದ ವಿಲಿಯಂ ಸಿಡ್ನಿ ಪೋರ್ಟರ್ ತನ್ನ ಹಾಸ್ಯ ಮಿಶ್ರಿತ ವಿಲಕ್ಷಣ ತಿರುವು ಕೊಡುವ ಕತೆಗಳಿಗೆ ಹೆಸರುವಾಸಿಯಾಗಿದ್ದಾನೆ. ಅಮೆರಿಕದ ಈ ಕತೆಗಾರ ಔಷಧ ರಸಾಯನ ಶಾಸ್ತ್ರ ಕಲಿತು ಬ್ಯಾಂಕ್ ನೌಕರಿಗೆ ಸೇರಿದ. ಬ್ಯಾಂಕಿನಿಂದ ದುಡ್ಡು ಲಪಟಾಯಿಸಿದ ಆರೋಪ ಹೊತ್ತು ಜೈಲಿಗೆ ಹೋಗುತ್ತಾನೆ. ಹೆಸರು ಬದಲಾಯಿಸಿಕೊಂಡು ಜೈಲಿನಲ್ಲಿ ಸಣ್ಣ ಕತೆಗಳನ್ನು ಬರೆಯಲು ತೊಡಗಿದ ಅವನು ಮುಂದೆ ಅದೇ ಹೆಸರಿನಿಂದ ಪ್ರಖ್ಯಾತನಾದ.

## ಜೆ.ವಿ. ಕಾರ್ಲೊ

ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ 40ಕ್ಕೂ ಹೆಚ್ಚು ಸಣ್ಣಕತೆಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ. ಕನ್ನಡ ಮಾತ್ರವಲ್ಲದೆ ಕೊಂಕಣಿ ಭಾಷೆಯಲ್ಲಿ ಅವರ 100ಕ್ಕೂ ಹೆಚ್ಚು ಸಣ್ಣಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.